**<u>ಪ್ರಮಾಣ ವಚನ ಬೋಧಿಸಿದ ದಿನಾಂಕಃ 05.05.2023</u>**

**<u>ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ</u>**

1. 2011 ರಲ್ಲಿ ಹೆಚ್ ಕ್ರಾಸ್ ಕೋಲಾರ ರಸ್ತೆಯಲ್ಲಿ ಕವಿತಾ ಡಾಬಾ ನಡೆಸುತ್ತಿದ್ದೆ ಎಂದರೆ ಸರಿ. ಸದರಿ ಡಾಬಾ ಇದ್ದ ಸ್ಥಳ ನನ್ನ ಮಾವನವರಿಗೆ ಸೇರಿದ್ದು ಎಂದರೆ ಸರಿ. ಸದರಿ ಸ್ಥಳವನ್ನು ನಾರಾಯಣಪ್ಪ ಎಂಬುವವರು ಖರೀದಿ ಮಾಡಿದ್ದರು ಎಂದರೆ ಸರಿ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ನಾರಾಯಣಪ್ಪರವರು ನಮ್ಮ ಮೇಲೆ ಸಿವಿಲ್ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಇನ್ನೂ ನ್ಯಾಯಾಲಯದ ಮುಂದೆ ಬಾಕಿ ಇರುತ್ತದೆ ಎಂದರೆ ಸರಿ. ನಾವು ಸದರಿ ಜಾಗವನ್ನು ನಾರಾಯಣಪ್ಪರವರಿಗೆ ಖಾಲಿ ಮಾಡಿಕೊಡದೇ ಅವರಿಗೆ ತೊಂದರೆ ನೀಡುತ್ತಿದ್ದೇವು ಎಂದರೆ ಸರಿಯಲ್ಲ. ಘಟನೆ ನಡೆಯುವ ಮುನ್ನ ನಾವು ಮತ್ತು ನಾರಾಯಣಪ್ಪರವರು ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇವೆ ಎಂದರೆ ಸರಿ. ನಾನು ಮತ್ತು ನನ್ನ ಹೆಂಡತಿ ನಾರಾಯಣಪ್ಪರವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದು ಹೇಳಿ ನಾರಾಯಣಪ್ಪರವರು ಎಸ್.ಪಿ.ಯವರ ಮುಂದೆ ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಎಸ್.ಪಿ. ಕಛೇರಿಗೆ ಬರಲು ನನಗೆ ನೋಟೀಸ್ ನೀಡಿದ್ದರು ಎಂದರೆ ಸರಿ. ನಂತರ ನಾನು ಎ.ಎಸ್.ಪಿ. ಅವರನ್ನು ಭೇಟಿ ಮಾಡಿದ್ದೆ ಎಂದರೆ ಸರಿ. ಅದೇ ದಿವಸ ನಾರಾಯಣಪ್ಪರವರು ಸಹ ಎ.ಎಸ್.ಪಿ. ಕಛೇರಿಗೆ ಬಂದಿದ್ದರು. ಆ ದಿವಸ ಸಮಯದ ಅಭಾವದ ಕಾರಣ ಎ.ಸಿ.ಪಿ.ಯವರು ನಮ್ಮಿಬ್ಬರಿಗೂ ಮತ್ತೊಂದು ದಿವಸ ಬರಲು ಹೇಳಿದರು ಎಂದರೆ ಸರಿ.

2. ದಿನಾಂಕ 17.11.2017 ರಂದು ನಾನು ಮತ್ತು ನಾರಾಯಣಪ್ಪವರು ಎ.ಎಸ್.ಪಿರವರ ಕಛೇರಿಯಲ್ಲಿ ಇದ್ದೇವು ಎಂದರೆ ಸರಿ. ನನ್ನ ಜೊತೆ ನನ್ನ ಹೆಂಡತಿ ಮತ್ತು ನನ್ನ ವಕೀಲರು ಇದ್ದರು ಎಂದರೆ ಸರಿ. ನಾರಾಯಣಪ್ಪರವರ ಜೊತೆ ಅವರ ಸ್ನೇಹಿತರು ಮತ್ತು ಅವರ ವಕೀಲರು ಇದ್ದರು ಎಂದರೆ ಸರಿ. ಆ ದಿವಸ 5.30 ಗಂಟೆಯವರೆಗೂ ಎ.ಎಸ್.ಪಿ ಯವರು ಕಛೇರಿಗೆ ಬರದ ಕಾರಣ ನಾನು ಅಲ್ಲಿಂದ ಹೊರಟುಹೋದೆ, ನಾರಾಯಣಪ್ಪ ಮತ್ತು ಅವರ ಕಡೆಯವರು ಎ.ಎಸ್.ಪಿ ಕಛೇರಿಯಲ್ಲಿ ಇದ್ದರು ಎಂದರೆ ಸರಿ.

3. ಎ.ಎಸ್.ಪಿ ಕಛೇರಿಯಿಂದ ಹೆಚ್ ಕ್ರಾಸ್ ಗೆ ಹೋಗಬೇಕಾದರೆ ಸುಮಾರು ಒಂದೂವರೆ ಗಂಟೆ ಆಗುತ್ತದೆ ಎಂದರೆ ಸರಿ. ನಮ್ಮ ಡಾಬಾ ಹೈವೆ ರಸ್ತೆಯಲ್ಲಿ ಇರುತ್ತದೆ, ರಸ್ತೆಯಲ್ಲಿ ಓಡಾಡುವ ಲಾರಿ ಮತ್ತು ಬಸ್ ಚಾಲಕರು ನಮ್ಮ ಡಾಬಾಗೆ ಬಂದು ಊಟ ಮಾಡುತ್ತಾರೆ, ಅವರು ಯಾರು ನನಗೆ ಚಿರಪರಿಚಿತರು ಆಗಿರುವುದಿಲ್ಲ ಎಂದರೆ ಸರಿ. ನಮ್ಮ ಡಾಬಾದಲ್ಲಿ ಕೆಲವರು ಮಧ್ಯಪಾನ ಮಾಡಿಕೊಂಡು ಊಟ ಮಾಡುತ್ತಾರೆ ಮತ್ತು ಸಣ್ಣಪುಟ್ಟ ಗಲಾಟೆ ಆದಾಗ ನಾನೇ ಸರಿಪಡಿಸುತ್ತಿದ್ದೆ ಎಂದರೆ ಸರಿ.

4. ಫ್ರಾಸಾ-20 ಡಾ. ಅಶೋಕ್ ಕುಮಾರ್ ನನಗೆ ಗೊತ್ತು. ಫ್ರಾಸಾ-20 ರವರಿಗೆ ನಮ್ಮ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಆ ಜಮೀನಿನ ವಿಚಾರದಲ್ಲಿ ನಮಗೂ ಮತ್ತು ಫ್ರಾಸಾ-20 ರವರ ನಡುವೆ ತಕರಾರು ಆಗಿರುತ್ತದೆ ಎಂದರೆ ಸರಿ. ಫ್ರಾಸಾ-20 ರವರು ನಮ್ಮ ಮೇಲೆ ಕ್ರಿಮಿನಲ್ ಕೇಸ್ ಮತ್ತು ಸಿವಿಲ್ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಗಳು ಇನ್ನೂನ್ಯಾಯಾಲಯದ ಮುಂದೆ ಬಾಕಿ ಇರುತ್ತವೆ ಎಂದರೆ ಸರಿ. ಮೊದಲಿನಿಂದಲೂ ನಮ್ಮ ಮತ್ತು ಫ್ರಾಸಾ-20 ರವರ ನಡುವೆ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ಆಗುತ್ತಿತ್ತು ಎಂದರೆ ಸರಿ. ನಮ್ಮ ಪಕ್ಕದ

ಜಮೀನಿನ ಮಾಲೀಕರ ಮೇಲೆ ರಸ್ತೆ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದೇವು ಎಂದರೆ ಸರಿ.

5. ಗಲಾಟೆ ಆದ ಸಮಯದಲ್ಲಿ ಕತ್ತಲು ಇತ್ತು ಎಂದರೆ ಸರಿ. ನನಗೆ ಮತ್ತು ನನ್ನ ಹೆಂಡತಿಗೆ ಯಾರು ಹಲ್ಲೆ ಮಾಡಿದರು ಎಂದು ನನಗೆ ಸರಿಯಾಗಿ ಗೊತ್ತಾಗಿರುವುದಿಲ್ಲ ಎಂದರೆ ಸರಿ. ನನಗೆ ಗಲಾಟೆಯಲ್ಲಿ ಗಾಯವಾಗಿದ್ದ ಕಾರಣ ನಾನು ಕೊಲಂಬಿಯ ಏಷ್ಯಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ ಎಂದರೆ ಸರಿ. ನಾನು ಇರುವಾಗ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿದ್ದಾಗ ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ನಿಶಾನೆ ಪಿ-5 ಹೇಳಿಕೆಯನ್ನು ಪೊಲೀಸರವರು ಯಾವಾಗ ಮತ್ತು ಎಲ್ಲಿ ಬರೆದುಕೊಂಡರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಪೊಲೀಸರವರು ನನ್ನ ಹೆಂಡತಿಯ ಶವವನ್ನು ಕೊಡುವ ಸಮಯದಲ್ಲಿ ಖಾಲಿ ಕಾಗದಕ್ಕೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಿಶಾನೆ ಪಿ-6 ರಿಂದ 11 ರಲ್ಲಿ ಕಾಣುವ ವಸ್ತುಗಳು ನನಗೆ ಸೇರಿದ್ದು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿ. ಎಂ.ಓ.2 ರಿಂದ 5 ನ್ನು ಪೊಲೀಸರಿಗೆ ಯಾರು ನೀಡಿದರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆರೋಪಿತರು ಕೃತ್ಯ ನಡೆದ ಸ್ಥಳಕ್ಕೆ ಬಂದಿರುವುದನ್ನು ನಾನು ಯಾವುತ್ತೂ ನೋಡಿರುವುದಿಲ್ಲ ಎಂದರೆ ಸರಿ. ನಮ್ಮ ಮತ್ತು ನಾರಾಯಣಪ್ಪರವರ ನಡುವೆ ಆಸ್ತಿ ವಿಚಾರವಾಗಿ ತಕರಾರಿದ್ದರಿಂದ ನಾವು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರವರು ಯಾವುದೇ ಬಟ್ಟೆ ಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ನಮ್ಮ ಡಾಬಾಗೆ ಬಂದು ನನ್ನ ಮತ್ತು ಗಜೇಂದ್ರನ ಮೇಲೆ ಹಲ್ಲೆ ಮಾಡಿ ಮತ್ತು ನನ್ನ ಹೆಂಡತಿ ಕವಿತಾಗೆ ಚಾಕು ಹಾಕಿ ಕೊಲೆ ಮಾಡಿದರು ಎಂದು ಸಾಕ್ಷಿ ನುಡಿದಿರುತ್ತೇನೆ, ಆದರೆ ಈ ದಿವಸ ಆರೋಪಿ ಪರ ವಕೀಲರು ಮಾಡಿದ ಪಾಟೀ-ಸವಾಲಿಲನಲ್ಲಿ ನಾನು ಕೃತ್ಯ ನಡೆದ ಸ್ಥಳಕ್ಕೆ ಆರೋಪಿತರು ಬಂದಿರುವುದಿಲ್ಲ ಮತ್ತು ಕೃತ್ಯ ನಡೆದ ಸಮಯದಲ್ಲಿ ಕತ್ತಲೇ ಆಗಿದ್ದರಿಂದ ನಮ್ಮ ಮೇಲೆ ಯಾರು ಹಲ್ಲೆ ಮಾಡಿದರು ಮತ್ತು ನನ್ನ ಹೆಂಡತಿಯನ್ನು ಯಾರು ಕೊಲೆ ಮಾಡಿದರು ಎಂದು ನನಗೆ ಸರಿಯಾಗಿ ಗೊತ್ತಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತೀರಾ ಇವೆರಡರಲ್ಲಿ ಯಾವುದು ಸತ್ಯ ಎಂದರೆ ಸಾಕ್ಷಿಯು ನಾನು ಈ ದಿವಸ ಆರೋಪಿ ಪರ ವಕೀಲರು ಮಾಡಿದ ಪಾಟೀ-ಸವಾಲಿನಲ್ಲಿ ನುಡಿದ ಸಾಕ್ಷಿಯೇ ಸತ್ಯ ಎಂದು ನುಡಿದಿರುತ್ತಾರೆ. ನಾನು ಆರೋಪಿತರ ಜೊತೆ ರಾಜಿ ಮಾಡಿಕೊಂಡು ಈ ದಿವಸ ಆರೋಪಿ ಪರ ವಕೀಲರು ಮಾಡಿದ ಪಾಟೀ-ಸವಾಲಿನಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.